## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.260-2019** **ಪಿ . ಡಬ್ಲುಃ 2**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಚಿನ್ನಸ್ವಾಮಪ್ಪ<br>ಕೇರೇಹಳ್ಳಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 28-07-2023. |

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಎಂ.ಎಸ್ ವಕೀಲರಿಂದಃ**

ನಾನು ಕೇರೇಹಳ್ಳಿಯ ವಾಸಿ. ವಾದಿಯವರು ಹರಗನಪುರದ ವಾಸಿ. ನಮ್ಮ ಮತ್ತು ವಾದಿ ಊರಿನ ನಡುವೆ 2 ಕಿ.ಮೀ ಅಂತರವಿದ್ದು, ನಾನು ನಮ್ಮೂರಿನಲ್ಲಿ ವಾಸವಿದ್ದು, ವಾದಿ ಅವರ ಊರಿನಲ್ಲಿ ವಾಸವಿರುತ್ತಾರೆ. ವಾದಿ ನನ್ನ ಸಂಬಂಧಿಸಿಕರು. ನನ್ನ ಮತ್ತು ವಾದಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇರುವುದಿಲ್ಲ. ವಾದಿಯವರ ಜಮೀನು ಹರಗನಪುರದಲ್ಲಿ ಇದ್ದು ಅದರ ವಿಸ್ತೀರ್ಣ 3 ಎಕರೆ 5 ಗುಂಟೆ ಇರುತ್ತದೆ. ಸದರಿ ಜಮೀನಿನ ಚೆಕ್ಕುಬಂದಿ ನಾನು ಹೇಳಬಲ್ಲೆ ಪೂರ್ವಕ್ಕೆಃ-ಸುರೇಶ್ ರವರ ಜಮೀನು, ಪಶ್ಚಿಮಕ್ಕೆಃ-ನೀರು ಹರಿಯುವ ಹಳ್ಳ, ಉತ್ತರಕ್ಕೆಃ- ಮಹದೇವಪ್ಪ ಹಾಗೂ ದಕ್ಷಿಣಕ್ಕೆಃ-ಚಿಕ್ಕಸ್ವಾಮಿ ರವರ ಜಮೀನು ಇರುತ್ತದೆ. ವಾದಿಯವರು ದಾವಾ ಷೆಡ್ಯೂಲ್ ಸ್ವತ್ತನ್ನು 40 ವರ್ಷಗಳ ಹಿಂದೆ ಕ್ರಯಕ್ಕೆ ಪಡೆದಿರುತ್ತಾರೆ ವಾದಿಯ ಜಮೀನಿನ ಸುತ್ತ-ಮುತ್ತ ನನಗೆ ಸೇರಿದ ಜಮೀನು ಇರುವುದಿಲ್ಲ. ನನಗೆ ಪ್ರತಿವಾದಿ ಗೊತ್ತು. ವಾದಿಯ ಜಮೀನಿನ ಪಕ್ಕ ಪ್ರತಿವಾದಿಯವರ ಜಮೀನು ಇರುತ್ತದೆ. ವಾದಿ ಮತ್ತು ಪ್ರತಿವಾದಿಗಳು ಅವರವರ ಜಮೀನನ್ನು ಅವರವರೇ ವ್ಯವಸಾಯ ಮಾಡುತ್ತಿರುತ್ತಾರೆ ಎಂದರೆ ಸರಿ. ಪ್ರತಿವಾದಿ ರವರ ಜಮೀನಿನ ವಿಸ್ತೀರ್ಣ ಎಷ್ಟಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯವರಿಗೆ ಎಷ್ಟು ಎಕರೆ ಜಮೀನು ಇದೆ, ಅದು ಅವರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ವಾದಿಯವರ ಜಮೀನನ್ನು ಹೊರತುಪಡಿಸಿ ಉಳಿದವರ ಜಮೀನಿನ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿಯವರು ಜಮೀನನ್ನು ಅಳತೆ ಮಾಡಿಸಿದ್ದು ಆ ಸಮಯ ನಾನು ಹೋಗಿದ್ದೆನು. ಸದರಿ ಅಳತೆಯನ್ನು ವಾದಿಯವರು ಜಮೀನನ್ನು ಕ್ರಯಕ್ಕೆ ಪಡೆದಾಗ ಮಾಡಿಸಿರುತ್ತಾರೆ. ಸರ್ಕಾರದಿಂದ ಜಮೀನನ್ನು ಅಳತೆ ಮಾಡಲಾಗಿರುತ್ತದೆ. ನಾನು ಹೇಳುವಂತೆ ವಾದಿಯವರು ದಾವಾ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಕೊಂಡ ನಂತರ ಯಾವುದೇ

ಅಳತೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಮಕ್ಕಳು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಪ್ರತಿವಾದಿಯರಿಗೆ ಸೇರಿದ 0.10 ಗುಂಟೆ ಜಮೀನನ್ನು ವಾದಿಯವರು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಒತ್ತುವರಿ ಸಂಬಂಧ ಅಳತೆ ಮಾಡಿಸುವಂತೆ ಪ್ರತಿವಾದಿಗಳು ವಾದಿಯನ್ನು ಕೇಳಿಕೊಂಡು ವಾದಿಯವರು ಅಳತೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಮತ್ತು ಅವರ ಮಕ್ಕಳು ಎಂದೂ ಸ್ವಾಧೀನದಲ್ಲಿ ಇಲ್ಲದಿದ್ದರೂ ಸಹ ತಮ್ಮದು ಎಂದು ಹೇಳಿಕೊಂಡು ವಾದಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನಾನು ನೋಡಿರುವುದಿಲ್ಲ, ದಾವಾ ಸ್ವತ್ತಿನ ಬಗ್ಗೆ ನನಗೆ ಮಾಹಿತಿ ಇಲ್ಲದೇ ಇದ್ದರೂ ಸಹ ವಾದಿ ನನ್ನ ಸಂಬಂಧಿಕರಾಗಿರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಬೇರೆ ಬೇರೆ ಊರಿನವರಾದ ಕಾರಣ ದಾವಾ ಷೆಡ್ಯೂಲ್ ಸ್ವತ್ತಿನ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**